(ಇಂದು ದಿನಾಂಕ 21-01-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಎನ್.ಎಚ್. ವಕೀಲರಿಂದಃ**

ನಾನು ಪುರಾತತ್ವ ಇಲಾಖೆಯಿಂದ ನೀಡಲಾದಂತಹ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. (ಸದರಿ ದಾಖಲಾತಿಯ ನೋಟರೀಕೃತ ಪ್ರತಿಯನ್ನು ನಿ.ಪಿ.5 ಎಂದು ಗುರುತಿಸಲಾಗಿರುತ್ತದೆ.) ನಿ.ಪಿ. 5 ರಲ್ಲಿ ಹೊಸದಾಗಿ ಮನೆ ನಿರ್ಮಾಣ ಮಾಡುವುದಕ್ಕೆ ಅನುಮತಿ ನೀಡಿರಲಿಲ್ಲ ಹಾಗೂ ಕೇವಲ ದುರಸ್ಥಿಗೊಳಿಸಲು ಮಾತ್ರ ಅನುಮತಿ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.5 ರ ದಾಖಲಾತಿಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನಾನು ವಕೀಲರ ಮೂಲಕ ಸದರಿ ದಾಖಲಾತಿಯಲ್ಲಿನ ಒಕ್ಕಣೆಗಳನ್ನು ಓದಿಸಿ ತಿಳಿದುಕೊಂಡಿರುವುದಿಲ್ಲ.

ಪ್ರತಿವಾದಿ ಪಂಚಾಯತ್‌ನವರು ನನಗೆ ನಿ.ಪಿ.5 ದಾಖಲಾತಿಯನ್ನು ಪುರಾತತ್ವ ಇಲಾಖೆಯವರು ನೀಡಿದ ನಂತರದಲ್ಲಿ ಮನೆ ಸಂಖ್ಯೆಯನ್ನು ರದ್ದುಗೊಳಿಸಿದ ಬಗ್ಗೆ ತಿಳುವಳಿಕೆ ನೀಡಿ ತಿಳುವಳಿಕೆ ಪತ್ರ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರಿದು ಆ ರೀತಿ ಯಾವುದೇ ತಿಳುವಳಿಕೆ ಪತ್ರವನ್ನು ಪ್ರತಿವಾದಿ ನನಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ನನ್ನ ಸ್ವತ್ತಿಗೆ ಸಂಬಂಧಪಟ್ಟಂತೆ ಪದೇ ಪದೇ ತೊಂದರೆ ನೀಡುತ್ತಿದ್ದ ಕಾರಣ ಪ್ರಸ್ತುತ ದಾವೆಯನ್ನು ಹೂಡುವ ಪ್ರಸಂಗ ಉದ್ಭವಿಸಿರುತ್ತದೆ. ಪಂಚಾಯತ್‌ದವರು ನನಗೆ ತೊಂದರೆಯನ್ನು ನೀಡಿರುತ್ತಾರಾ ಎಂದರೆ ಸಾಕ್ಷಿಯು ಪಂಚಾಯತಿಯ ಅಧಿಕಾರಿಗಳು ಪದೇ ಪದೇ ದಾವಾ ಸ್ವತ್ತಿಗೆ ಬಂದು ತೊಂದರೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ಪಂಚಾಯತಿಯಲ್ಲಿನ ನಿಬಂಧನೆಗಳಂತೆ ಕಟ್ಟಡ ನಿರ್ಮಿಸಿ ಪೂರ್ಣತಃ ಪ್ರಮಾಣಪತ್ರವನ್ನು ನೀಡಿದಲ್ಲಿ ಮನೆ ಸಂಖ್ಯೆ ನೀಡಲಾಗುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ದಾಖಲಾತಿಯನ್ನು ನಾನು ಪಂಚಾಯತಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಪರವಾನಿಗೆಯಲ್ಲಿನ

ನಿಬಂಧನೆಗಳಂತೆ ನಾನು ಮನೆ ನಿರ್ಮಿಸದ ಕಾರಣ ನನಗೆ ನೀಡಲಾದ ಪರವಾನಿಗೆಯನ್ನು ಹಾಗೂ ನನ್ನ ಕಟ್ಟಡಕ್ಕೆ ನೀಡಲಾದ ಸಂಖ್ಯೆಯನ್ನು ರದ್ದುಗೊಳಿಸಿ, ಆ ಬಗ್ಗೆ ನನಗೆ ತಿಳುವಳಿಕೆ ಪತ್ರವನ್ನೂ ಸಹ ನೀಡಲಾಗಿರುತ್ತದೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಮನೆ ನಿರ್ಮಿಸಲು ಪರವಾನಿಗೆ ಕೋರಿ ಸಲ್ಲಿಸಿದಂತಹ ಅರ್ಜಿಯೊಂದಿಗೆ ಲಗತ್ತಿಸಲಾದ ದಾಖಲಾತಿಗಳ ಅನ್ವಯ ನಾನು ಮನೆ ನಿರ್ಮಾಣ ಮಾಡದ ಕಾರಣ ಮನೆ ಸಂಖ್ಯೆ ನೀಡಿರುವುದನ್ನು ಪ್ರತಿವಾದಿಯು ರದ್ದುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಮನೆ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಎಲ್ಲಾ ರೀತಿಯ ದಾಖಲಾತಿ ಪಡೆಯುವುದು ಹಾಗೂ ಪತ್ರ ವ್ಯವಹಾರಗಳನ್ನು ನನ್ನ ತಾಯಿಯವರು ಮೊಕ್ತ್ಯಾರುನಾಮೆ ನೀಡಿದ ನಂತರ ನಾನೇ ಮಾಡಿರುತ್ತೇನೆ. ನಾನು ನಿಯಮಗಳ ಉಲ್ಲಂಘನೆ ಮಾಡಿ ಮನೆಯನ್ನು ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮನೆ ನಿರ್ಮಿಸಲು ಕಾನೂನು ರೀತ್ಯಾ ವಿಧಿಸಲಾದ ನಿಬಂಧನೆಗಳನ್ನು ಪಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಬಂಧನೆಗಳನ್ನು ಉಲ್ಲಂಘಿಸಿ ಮನೆ ನಿರ್ಮಾಣ ಮಾಡಿದ ಕಾರಣ ಮನೆ ಸಂಖ್ಯೆಯನ್ನು ಪ್ರತಿವಾದಿಯು ರದ್ದುಪಡಿಸಿದ್ದು, ಯಾವುದೇ ಒಳಸಂಚಿಗೆ ಒಳಗಾಗಿ ಪ್ರತಿವಾದಿಯು ಮನೆ ಸಂಖ್ಯೆ ರದ್ದುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ